**<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**

**<u>Spl.C.101/2023</u>**

ದಿನಾಂಕ 18.12.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 1 ಪ್ರಾಸಾ -1

| | | |
|---|---|---|
| ಹೆಸರು | ಃ | ಶಿವರುದ್ರಯ್ಯ ಟಿ.ಜೆ. |
| ತಂದೆಯ ಹೆಸರು | ಃ | ಜುಂಜಯ್ಯ |
| ವಯಸ್ಸು | ಃ | 49 ವರ್ಷ |
| ಉದ್ಯೋಗ | ಃ | ವ್ಯವಸಾಯ/ಕೂಲಿ |
| ವಾಸಸ್ಥಳ | ಃ | ತಟಗುಪ್ಪೆ, ಕನಕಪುರ ತಾಲ್ಲೂಕು. |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ಚಾಸಾ 2 ರಿಂದ 8 ನನಗೆ ಗೊತ್ತು. ನಾನು ಆದಿ ಕರ್ನಾಟಕ ಜಾತಿಗೆ ಸೇರಿದವನಾಗಿರುತ್ತೇನೆ. ನ್ಯಾಯಾಲಯದ ಮುಂದಿರುವ 1 ಮತ್ತು 2ನೇ ಆರೋಪಿ ನನಗೆ ಗೊತ್ತು. ಅವರು ಒಕ್ಕಲಿಗ ಜಾತಿಗೆ ಸೇರಿದವರಾಗಿರುತ್ತಾರೆ. 1 ಮತ್ತು 2ನೇ ಆರೋಪಿಗೆ ನಾನು ಆದಿ ಕರ್ನಾಟಕ ಜಾತಿಗೆ ಸೇರಿದವನು ಎಂದು ಗೊತ್ತಿರುತ್ತದೆ.

2. ದಿನಾಂಕ 22.03.2023 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಚಾಸಾ 2 ರಾಜೇಗೌಡ ರವರು ಕರೆದಿದ್ದರಿಂದ ನಾನು ನನ್ನ ಗ್ರಾಮದ ಮಾರಮ್ಮನ ದೇವಸ್ಥಾನದ ಬಳಿ ಬೈಕಿನಲ್ಲಿ ಬಂದು ನಿಂತಿದ್ದೆ. ಅಲ್ಲಿ ಕುಳ್ಳಣ್ಣನನ್ನು ಕಾಯುತ್ತಿದ್ದು, ಆ ಸಮಯದಲ್ಲಿ ಚಾಸಾ 2 ರಾಜೇಗೌಡ ಸಹ ನನ್ನ ಜೊತೆ ಇದ್ದರು. ಆ ಸಮಯದಲ್ಲಿ ಆರೋಪಿಗಳಿಬ್ಬರು ಅಲ್ಲಿಗೆ ಬಂದು ಜಮೀನು ವಿಚಾರದಲ್ಲಿ ನಮ್ಮ ಮೇಲೆ ರಾಮಶೆಟ್ಟಿಯ ಮೂಲಕ ಕೇಸು ಹಾಕಿಸಿದ್ದೀರಾ ಎಂದು ಹೇಳಿ ಸೂಳೆ ಮಗನೇ, ಬೊಳಿ ಮಗನೇ, ಹೊಲೆಯ ಎಂದು ಬೈದರು. ಇಬ್ಬರು ಸೇರಿ ನನ್ನನ್ನು

ಎಳೆದಾಡಿ ನೆಲಕ್ಕೆ ಕೆಡವಿ, ಕಾಲಿನಿಂದ ತುಳಿದು, ಹೊಡೆದರು. ಆರೋಪಿ ನಿಖಿಲಾಕ್ಷಾ ನನ್ನ ಕೈಯಲ್ಲಿದ್ದ ಮೊಬೈಲ್ ಕಿತ್ತುಕೊಂಡು ಹೊಡೆದು ಹಾಕಿದ, ಅದರಿಂದ ನನಗೆ ರೂ.5,000/- ನಷ್ಟ ವಾಯಿತು. ಆರೋಪಿ ಶಿವರಾಜು ನನ್ನ ಮೇಲೆ ಕಲ್ಲು ಎತ್ತಿಹಾಕಲು ಬಂದಾಗ ಚಾಸಾ 2 ರಾಜೇಗೌಡ ರವರು ಕಲ್ಲನ್ನು ಕಿತ್ತುಕೊಂಡು ನನ್ನನ್ನು ಕಾಪಾಡಿದರು. ನಾನು ನನ್ನ ಜೀವ ಉಳಿಸಿಕೊಳ್ಳಲು ತಪ್ಪಿಸಿಕೊಂಡು ಓಡಿ ಹೋಗುತ್ತಿರಬೇಕಾದರೆ ಆರೋಪಿಗಳು ನನ್ನನ್ನು ಹಿಡಿದುಕೊಂಡು ನಿನ್ನ ಸಂಸಾರವನ್ನು ಪೆಟ್ರೋಲ್ ಸುರಿದು ಸುಟ್ಟು ಹಾಕುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ. ಅವರಿಂದ ತಪ್ಪಿಸಿಕೊಂಡು ನಾನು ಕೋಡಿಹಳ್ಳಿ ಪೊಲೀಸ್ ಠಾಣೆಗೆ ಹೋದೆ. ನಾನು ಪೊಲೀಸ್ ಠಾಣೆಗೆ ಹೋದಾಗಲು ಸಹ 2ನೇ ಆರೋಪಿ ನಿಥಿಲಾಕ್ಷಾ 7-8 ಜನ ಹುಡುಗರನ್ನು ಗುಂಪು ಕಟ್ಟಿಕೊಂಡು ಬಂದು ನನ್ನನ್ನು ಹೊಡೆಯಲು ಪ್ರಯತ್ನಿಸಿದ. ಪೊಲೀಸ್ ಠಾಣೆಯಲ್ಲಿ ನನಗೆ ಆಸ್ಪತ್ರೆಗೆ ಹೋಗಲು ಹೇಳಿ, ನಾನು ಆಸ್ಪತ್ರೆಗೆ ಹೋಗಿ ಚೀಕಿತ್ಸೆ ಪಡೆದೆ. ಮಾರನೇ ದಿನ ಬಂದು ನಾನು ಠಾಣೆಗೆಯಲ್ಲಿ ದೂರು ಕೊಟ್ಟೆ. ಸದರಿ ದೂರನ್ನು ನೋಡಿದರೆ ಗುರುತಿಸಬಲ್ಲೆ. ದೂರು ಮತ್ತು ಸಹಿಯನ್ನು ಸಾಕ್ಷಿ ಗುರುತಿಸಿದ್ದು, ದೂರನ್ನು ನಿಶಾನೆ ಪಿ 1 ಮತ್ತು ಸಾಕ್ಷಿಯ ಸಹಿಯನ್ನು ನಿಶಾನೆ ಪಿ 1(ಎ) ಎಂದು ಗುರುತಿಸಲಾಯಿತು.

3. ದಿನಾಂಕ 28.03.2023 ರಂದು ಡಿವೈಎಸ್‌ಪಿ ರವರು ಮಧ್ಯಾಹ್ನ 3.30 ರಿಂದ 4 ಗಂಟೆಯ ಸಮಯದಲ್ಲಿ ಸ್ಥಳಕ್ಕೆ ಭೇಟಿ ನೀಡಿದ್ದು, ಆಗ ಘಟನಾ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಸ್ಥಳದಲ್ಲಿ ನನ್ನಿಂದ ಕಿತ್ತುಕೊಂಡಂತಹ ಮೊಬೈಲ್ ಫೋನ್ ಚಿಂದಿಯಾಗಿರುವಂತಹ ನನ್ನ ಷರ್ಟ್ ಮತ್ತು ಹಲ್ಲೆ ಮಾಡಲು ಉಪಯೋಗಿಸಿದ ಕಲ್ಲನ್ನು ಜಪ್ತಿ, ಪಡಿಸಿಕೊಂಡಿರುತ್ತಾರೆ. ಅಲ್ಲಿ ಪೊಲೀಸರು ಬರವಣಿಗೆ ಮಾಡಿಕೊಂಡು ನನ್ನಸಹಿ ಪಡೆದಿರುತ್ತಾರೆ. ಸಾಕ್ಷಿ ಸ್ಥಳ ಪಂಚನಾಮೆಯಲ್ಲಿರುವಂತಹ ತನ್ನ ಸಹಿಯನ್ನು ನೋಡಿ

ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿಶಾನೆ ಪಿ 2 ಮತ್ತು ಸಾಕ್ಷಿಯ ಸಹಿಯನ್ನು ನಿಶಾನೆ ಪಿ 2(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಪೊಲೀಸರು ಫೋಟೋ ಸಹ ತೆಗೆದಿರುತ್ತಾರೆ. ಸಾಕ್ಷಿ ಎರಡು ಫೋಟೋಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 3 ಮತ್ತು 4 ಎಂದು ಗುರುತಿಸಲಾಯಿತು. ಪೊಲೀಸರು ವಶಪಡಿಸಿಕೊಂಡಂತಹ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಹರಿದಿರುವ ತನ್ನ ಷರ್ಟ್, ಜಖಂಗೊಂಡಿರುವಂತಹ ತನ್ನ ಮೊಬೈಲ್ ಫೋನ್ ಮತ್ತು ಕೃತ್ಯಕ್ಕೆ ಉಪಯೋಗಿಸಿದಂತಹ ಸೈಜು ಕಲ್ಲನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮುದ್ದೆಮಾಲು 1 ರಿಂದ 3 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಕುಮಾರಿ ಎಸ್.ಎಸ್. ವಕೀಲರು ಶ್ರೀ.ಎಂ.ಕೆ. ವಕೀಲರ ಪರವಾಗಿ ಸಮಯಾವಕಾಶ ಕೋರಿದ್ದು, ತನ್ನ ಹಿರಿಯ ವಕೀಲರಿಗೆ ಕಾಲಿಗೆ ಏಟಾಗಿರುವ ಕಾರಣ ನಡೆದಾಡಲು ಆಗುವುದಿಲ್ಲ, ಆ ಕಾರಣ ಗೈರು ಹಾಜರಿರುವತ್ತಾರೆ ಎಂದು ಸಮಾಯವಕಾಶ ಕೋರಿರುವ ಕಾರಣ ಸಾಕ್ಷಿಯ ಭತ್ಯೆವನ್ನು ಬರೆಸುವಂತೆ ಆದೇಶಿಸಿ ಪಾಟೀಸವಾಲಿಗೆ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.